**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹದಿನಾಲ್ಕನೇ ಅಧಿವೇಶನ**

# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–33)**

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2010ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2010ನ್ನು (2010ರ ಕರ್ನಾಟಕ ಅಧಿನಿಯಮ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2.** 27**ನೇ ಹೊಸ ಪ್ರಕರಣದ ಸೇರ್ಪಡೆ.-** ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2010ರ (2010ರ ಕರ್ನಾಟಕ ಅಧಿನಿಯಮ 12) 26ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು,-

"**27.ಅನುಸೂಚಿಯನ್ನು ತಿದ್ದಪಡಿ ಮಾಡುವ ಅಧಿಕಾರ.-**ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಮೂದುಗಳನ್ನು ಸೇರಿಸಬಹುದು, ಮಾರ್ಪಡಿಸಬಹುದು ಅಥವಾ ಬಿಟ್ಟುಬಿಡಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿನಿಯಮಕ್ಕೆ ಸೇರಿಸಲಾದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಮೂದುಗಳನ್ನು ಸೇರಿಸುವ, ಮಾರ್ಪಡಿಸುವ ಅಥವಾ ಬಿಟ್ಟುಬಿಡುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಲು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2010 (2010ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚುವರಿ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ವಿ. ಸುನಿಲ್ ಕುಮಾರ್**
ಇಂಧನ,
ಕನ್ನಡ ಮತ್ತು ಸಂಸ್ಕೃತಿ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**
**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಅಧಿನಿಯಮ, 2010ರ**
**(2010ರ ಕರ್ನಾಟಕ ಅಧಿನಿಯಮ 12) ಉದ್ಧೃತ ಭಾಗ**

**Xxx xxx xxx**

**26. ವಿನಿಯಮಗಳನ್ನು ರಚಿಸಲು ಪ್ರಾಧಿಕಾರದ ಅಧಿಕಾರ.-** ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 25ನೇ ಪ್ರಕರಣದ ಮೇರೆಗೆ ಮಾಡಲಾದ ನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

Xxx xxx xxx

| ಕ್ರಮ ಸಂಖ್ಯೆ | ತಾಲ್ಲೂಕುಗಳು ಮತ್ತು ಇತರ ಪ್ರದೇಶಗಳ ಹೆಸರು |
|---|---|
| 1 | ಆನೇಕಲ್ |
| 2 | ಹೊಸಕೋಟೆ |
| 3 | ಕನಕಪುರ |
| 4 | ಚಳ್ಳಕೆರೆ |
| 5 | ಹಿರಿಯೂರು |
| 6 | ಮೊಳಕಾಲ್ಮೂರು |
| 7 | ಬಾಗೇಪಲ್ಲಿ |
| 8 | ಬಂಗಾರಪೇಟೆ |
| 9 | ಚಿಂತಾಮಣಿ |
| 10 | ಗೌರಿಬಿದನೂರು |
| 11 | ಗುಡಿಬಂಡೆ |
| 12 | ಮಾಲೂರು |
| 13 | ಮುಳಬಾಗಿಲು |
| 14 | ಶ್ರೀನಿವಾಸಪುರ |
| 15 | ಮಧುಗಿರಿ |
| 16 | ಪಾವಗಡ |
| 17 | ಶಿರಾ |
| 18 | ಬಂಟ್ವಾಳ |
| 19 | ಮಂಗಳೂರು |
| 20 | ಪುತ್ತೂರು |
| 21 | ಸುಳ್ಯ |
| 22 | ಮಡಿಕೇರಿ |
| 23 | ವಿರಾಜಪೇಟೆ |
| 24 | ಚಾಮರಾಜನಗರ |
| 25 | ಗುಂಡ್ಲುಪೇಟೆ |
| 26 | ಹೆಗ್ಗಡದೇವನಕೋಟೆ |
| 27 | ಕೊಳ್ಳೇಗಾಲ |
| 28 | ವಿಜಯಪುರ |
| 29 | ಇಂಡಿ |
| 30 | ಬಳ್ಳಾರಿ |
| 31 | ಸಂಡೂರು |
| 32 | ಶಿರಗುಪ್ಪ |
| 33 | ಅಫಜಲ್‌ಪುರ |
| 34 | ಆಳಂದ |
| 35 | ಚಿಂಚೋಳಿ |
| 36 | ಸೇಡಂ |
| 37 | ಶಹಾಪುರ |
| 38 | ಯಾದಗಿರಿ |
| 39 | ಮಾನ್ವಿ |
| 40 | ರಾಯಚೂರು |
| 41 | ಅಥಣಿ |
| 42 | ಬೆಳಗಾವಿ |
| 43 | ಹುಕ್ಕೇರಿ |
| 44 | ಚಿಕ್ಕೋಡಿ |
| 45 | ಖಾನಾಪುರ |
| 46 | ಕಾರವಾರ |
| 47 | ಜೋಯಿಡಾ |
| 48 | ಔರಾದ |
| 49 | ಬಸವಕಲ್ಯಾಣ |
| 50 | ಭಾಲ್ಕಿ |
| 51 | ಬೀದರ್ |
| 52 | ಹುಮ್ನಾಬಾದ್ |

**Xxx xxx xxx**

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಕಾಸಸೌಧ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 500, 19ನೇ ಡಿಸೆಂಬರ್, 2022

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**FOURTEENTH SESSION**

# THE KARNATAKA BORDER AREA DEVELOPMENT AUTHORITY (AMENDMENT) BILL, 2022

**(LA Bill No. 33 of 2022)**

A Bill to amend the Karnataka Border Area Development Authority Act, 2010.

Whereas it is expedient to amend the Karnataka Border Area Development Authority Act, 2010 (Karnataka Act 12 of 2010), for the purposes hereinafter appearing;

Be it enacted by the Karnataka State Legislature in the seventy third year of the Republic of India, as follows:-

**1. Short title and commencement.-** (1) This Act may be called the Karnataka Border Area Development Authority (Amendment) Act, 2022.

(2) It shall come into force at once.

**2. Insertion of new section 27.-** In the Karnataka Border Area Development Authority Act, 2010 (Karnataka Act 12 of 2010), after section 26, the following shall be inserted, namely:-

"**27. Power to amend the Schedule.-** The State Government may by notification in the official Gazette, add, alter or omit any of the entries specified in the schedule appended to the Act"

## STATEMENT OF OBJECTS AND REASONS

It is considered necessary to amend the Karnataka Border Area Development Authority Act, 2010 (Karnataka Act 12 of 2010) to give power to the State Government to add or alter or omit any of the entries specified in the schedule appended to the Act by notification in the Official Gazette.

Hence, the Bill.

**FINANCIAL MEMORANDUM**

There is no extra expenditure involved in the proposed Legislative measure.

**V. SUNIL KUMAR**
Minister for Energy,
Kannada and Culture

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA BORDER AREA DEVELOPMENT AUTHORITY ACT, 2010 (KARNATAKA ACT 12 OF 2010)**

**XXX XXX XXX**

**26. Power of Authority to make regulations.-** The Authority may subject to the provisions of this Act and the rules made under section 26 and with the previous sanction of the State Government, by notification, make regulations to carry-out the purposes of this Act.

**SCHEDULE**

**[See clause (b) of section 2]**

| Sl.No. | Name of Taluks and other areas |
|---|---|
| 1 | Anekal |
| 2 | Hoskote |
| 3 | Kanakapur |
| 4 | Challakere |
| 5 | Hiriyur |
| 6 | Molakalmur |
| 7 | Bagepalli |
| 8 | Bangarpet |
| 9 | Chintamani |
| 10 | Gowribidanur |
| 11 | Gudibande |
| 12 | Malur |
| 13 | Mulbagil |
| 14 | Srinivasapur |
| 15 | Madhugiri |
| 16 | Pavagada |
| 17 | Sira |
| 18 | Bantwal |
| 19 | Mangalore |
| 20 | Puttur |
| 21 | Sullia |
| 22 | Madikeri |
| 23 | Virajpet |
| 24 | Chamarajnagar |
| 25 | Gundlupet |
| 26 | Heggadadevanakote |
| 27 | Kollegal |
| 28 | Bijapur |
| 29 | Indi |
| 30 | Bellary |
| 31 | Sandur |
| 32 | Siriguppe |
| 33 | Afsalpur |
| 34 | Aland |
| 35 | Chincholi |
| 36 | Sedam |
| 37 | Shahapur |
| 38 | Yadgir |
| 39 | Manvi |
| 40 | Raichur |
| 41 | Athani |
| 42 | Belgaum |
| 43 | Hukkeri |
| 44 | Chikkodi |
| 45 | Khanapur |
| 46 | Karwar |
| 47 | Joida |
| 48 | Aurad |
| 49 | Basavakalyan |
| 50 | Bhalki |
| 51 | Bidar |
| 52 | Humnabad |

XXX XXX XXX

Govt. Press, Suvarna Vikasa Soudha, Belgavi, 19th Dec, 2022, P7, W.D. , Copies 500